ಇ) 1993-94ನೇ ಸಾಲಿನ ಆಯವ್ಯಯದಲ್ಲಿ ಸದರಿ ಕಟ್ಟಡ ಒದಗಿಸಲು ಸರ್ಕಾರ ಮಂಜೂರಾತಿ ನೀಡಿದೆಯೇ?

ಈ) ಸದರಿ ಕಟ್ಟಡದ ಅಂದಾಜು ಮೊತ್ತ ಎಷ್ಟು? ಹಾಗೂ ಕಟ್ಟಡದ ಕೆಲಸ ಯಾವಾಗ ಪ್ರಾರಂಭವಾಗುವುದು?

ಉ) ಈ ಬಗ್ಗೆ ರಾಜ್ಯ ಸರ್ಕಾರದ ನೀತಿ ಹಾಗೂ ಕ್ರಮವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಕಟ್ಟಡದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕಟ್ಟಡದ ನಿರ್ಮಾಣಕ್ಕೆ ತಾಲ್ಲೂಕು ಪಂಚಾಯಿತಿಯ ಅವರಣದಲ್ಲಿ ನಿವೇಶನವನ್ನು ನೀಡಲು ಪಂಚಾಯಿತಿ ಸಮಿತಿಯು ಠರಾವು ಪಾಸ್ ಮಾಡಿದ್ದು ಸದರಿ ಠರಾವಿನ ಮಂಜೂರಾತಿಗಾಗಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು, ಹಿರೇಕೆರೂರು ಇವರು ಜಿಲ್ಲಾ ಪರಿಷತ್ತಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ. ಹಾಗೂ ಜಿಲ್ಲಾ ಪರಿಷತ್ತಿನಿಂದ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ.

ಇ) ನಿವೇಶನವು ಇನ್ನೂ ದೊರಕಿಲ್ಲದ ಕಾರಣ 1993-94ನೇ ಸಾಲಿನಲ್ಲಿ ಕಟ್ಟಡದ ನಿರ್ಮಾಣಕ್ಕೆ ಮಂಜೂರಾತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಕಟ್ಟಡದ ನಿರ್ಮಾಣಕ್ಕೆ ಸೂಕ್ತ ನಿವೇಶನ ದೊರೆತ ನಂತರ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನದ ಮೇರೆಗೆ ಕಟ್ಟಡ ಕೈಗೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು : ಲಿಖಿತ ಮೂಲಕ ಪ್ರಶ್ನೆಗಳ ಪಟ್ಟಿ ಮತ್ತು ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. Now the Question hour is over.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ : ರಾಜ್ಯದಲ್ಲಿ ಡೈರಿಗಳಿಂದ ರೈತರಿಗೆ ತೊಂದರೆ.

* ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇವೆ. ಎಲ್ಲ ಪಕ್ಷದವರು ಕೊಟ್ಟಿದ್ದಾರೆ. ನಾನು ನಂತರ ಬರುತ್ತೇನೆ. ಮುಖ್ಯವಾಗಿ ನಮ್ಮ ಅನಿಮಲ್ ಹಸ್‌ಬೆಂಡರಿ ಮಿನಿಸ್ಟರ್ ಇಲ್ಲಿಯೇ ಇದ್ದಾರೆ. ನಾವು ಮೊನ್ನೆ ಈ ಸದನದಲ್ಲಿ ರೈತರಿಗೆ ಡೈರಿಗಳಿಂದ ಇಷ್ಟೊಂದು ಅನ್ಯಾಯ ಆಗುತ್ತಿದೆ. ಸಾಧಾರಣ 19-20 ಕೋಟಿ ರೂಪಾಯಿ ಬಾಕಿ ಇದೆ. ಅದ್ದರಿಂದ ರೈರು ಕಷ್ಟದಲ್ಲಿದ್ದಾರೆಂದು ನಾನು ಸರ್ಕಾರದ ಗಮನಕ್ಕೆ ತಂದಿದ್ದೆ. ಸರ್ಕಾರದವರು ಸಹ, ಇದು ಗೊತ್ತಿರತಕ್ಕ ವಿಚಾರ, ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಹೇಳಿದ್ದರು. ಅದು ನಮಗೆ ಸಮಾಧಾನವಾಗಲಿಲ್ಲ, ನಾವು ವಾಕ್‌ಔಟ್‌ಮಾಡಿದೆವು. ಇವತ್ತು ಏನಾಗಿದೆ ಎಂದರೆ, ರೈತರಿಗೆ ಅಷ್ಟೇ ಅಲ್ಲ, ಈ ಡೈರಿಯಿಂದ ರಾಜ್ಯದ ಗ್ರಾಹಕರಿಗೂ ಸಹ ಬಹಳ ದೊಡ್ಡ ಮೋಸ ಆಗುತ್ತಿದೆ. ಮೋಸ ಎಂದರೆ ತುಮಕೂರು ಡೈರಿ ಹಾಲು ಇದು ಒಂದು ಲೀಟರ್ ಇರಬೇಕು. ಆದರೆ, ಇದರಲ್ಲಿ 700 ಎಂ.ಎಲ್. ಕಂಟೆಂಟ್ಸ್

ಇಲ್ಲ. ಯಾವ ಪ್ರಕಾರ ಮೋಸ ಗ್ರಾಹಕರಿಗೆ ನಡೆಯುತ್ತಿದೆ ಎಂಬುದನ್ನು ಸಚಿವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಸಚಿವರು ಕೊಟ್ಟಿರತಕ್ಕ ಹೇಳಿಕೆಯನ್ನು ನಾನು ನೋಡಿದ್ದೇನೆ. ಏಜೆಂಟ್ಸ್ ಕೆಲವು ಕಡೆ ಮಿಸ್‌ಯೂಸ್ ಮಾಡುತ್ತಿದ್ದಾರೆ ಎಂದು ಇದೆ. ಇವತ್ತು ಏಜೆಂಟ್ಸ್ ಮಾಡುತ್ತಾರೋ ಅಥವಾ ಮುಖ್ಯವಾಗಿ ಡೈರಿ ಪಾಯಿಂಟ್‌ನಲ್ಲಿ ಮಿಸ್‌ಯೂಸ್ ಆಗುತ್ತದೆಯೋ ಒಟ್ಟಿನಲ್ಲಿ ಇಂಥ ಮೋಸ ಆಗುತ್ತಿದೆ, ಇದನ್ನು ನೀವು ನೋಡಬೇಕಾಗಿದೆ. ಇವತ್ತಲ್ಲ, ಇದು ನನ್ನ ಗಮನಕ್ಕೆ ಬಂದಿದ್ದು ನಿನ್ನೆ. ಆದರೆ, ಇದು ಕಳೆದ ಎರಡು ಮೂರು ತಿಂಗಳಿಂದ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ಇದರಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಲೀಕೇಜ್ ಇದೆ. ಒಂದು ಕಡೆ ರೈತರಿಗೆ ಮೋಸ, ಮತ್ತೊಂದು ಕಡೆ ಈ ಡೈರಿಗಳು, ಫೆಡರೇಶನ್‌ನನ್ನು ದಿವಾಳಿ ಮಾಡುತ್ತಿವೆ. ಮತ್ತೊಂದು ಕಡೆ ಕನ್ಸ್ಯೂಮರ್ಸ್‌ಗೂ ಮೋಸ. ಹಾಗಾಗಿ ಇದರ ಅವಶ್ಯಕತೆ ಇದೆಯೇನು? ಯಾವ ಪ್ರಕಾರ ನಿಮ್ಮಲ್ಲಿ ಜನ ವಿಶ್ವಾಸ ಇಡಬೇಕು? ಇವತ್ತು ಈ ಪ್ರಕಾರ ಏನು ಒಂದು ಲೀಟರ್‌ಗೆ ಹಣ ತೆಗೆದುಕೊಂಡು, 700 ಎಂ.ಎಲ್. ಏನು ತಾವು ಮಾರಾಟ ಮಾಡುತ್ತಿದ್ದೀರಿ, ಅದರ ಬಗ್ಗೆ ತಾವೇನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ನಮಗೆ ಸ್ಪಷ್ಟವಾಗಿ ಗೊತ್ತಾಗಬೇಕಾಗಿದೆ ಮತ್ತು ನಾನು ಸಚಿವರ ಗಮನಕ್ಕೆ ತಂದನಂತರ, ಅವರು ಭೇಟಿ ಮಾಡಿ ನೋಡಬೇಕಾಗುತ್ತದೆ. ಇದನ್ನು ತಮ್ಮ ಕಡೆ ಕಳುಹಿಸುತ್ತೇನೆ. ಇದನ್ನು ತಾವು ನೋಡಿ,ಇದರ ಬಗ್ಗೆ ತಾವು ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ಮತ್ತು ಗ್ರಾಹಕರಿಗೆ ಎಲ್ಲೆಲ್ಲಿ ಮೋಸ ಆಗಿದೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಈಗೇನು ಹಾಲು ಬಂದಿದೆ, ಇದು ತುಮಕೂರು ಡೈರಿಯಿಂದ ಬಂದಿದೆ. ತಾವು ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಸ್ಪಷ್ಟೀಕರಣ ನೀಡಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇದು ಕೇವಲ ತುಮಕೂರು ಡೈರಿ ಒಂದೇ ಅಲ್ಲ, ಇನ್ನೂ ಕೆಲವು ಕಡೆ ಗ್ರಾಹಕರಿಗೆ, ಈ ತರದ ಮೋಸ ಸಾರೋದ್ಧಾರವಾಗಿ ನಡೆಯುತ್ತಿದೆ. ಇದು ಒಂದು ಗಮನಕ್ಕೆ ಬಂದಿರತಕ್ಕಂಥಾದ್ದು. ಇದನ್ನು ಸಂಪೂರ್ಣವಾಗಿ ಸರ್ಕಾರ ಪರಿಶೀಲನೆ ಮಾಡಬೇಕಾದ್ದು, ತಾವು ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಇದರ ಜೊತೆಗೆ ಕೆಲವು ಹಾಲಿನ ಪೊಟ್ಟಣಗಳಲ್ಲಿ, ಜಿರಲೆಗಳು ಬಂದಿರುವುದು ಉಂಟು, ನೊಣಗಳು ಬಂದಿರುವುದು. ಇಂತಹ ಕೆಟ್ಟ ಪರಿಸ್ಥಿತಿ, ಬೆಂಗಳೂರು ನಗರದಲ್ಲಿ ಅನೇಕ ಕಡೆ ಬಂದಿದೆ. ಇದು ರಾಜ್ಯಾದ್ಯಂತ ಇರತಕ್ಕಂಥ ಒಂದು ಪಿಡುಗು. ಇದನ್ನು ನೋಡಬೇಕಾದದ್ದು ತಮ್ಮ ಕರ್ತವ್ಯ. ಇದಲ್ಲದೆ ಅನೇಕ ಕಡೆ ಕೆಟ್ಟು ಹೋಗಿರತಕ್ಕಂಥ ಲಕ್ಷಾಂತರ ಲೀಟರ್ ಹಾಲನ್ನು ಮೋರಿಗೆ ಸುರಿದಿರತಕ್ಕಂಥ ನಿದರ್ಶನಗಳೂ ಉಂಟು. ತಮಗೆ ಹೇಳುವುದಾದರೆ, ಮೈಸೂರು ಡೈರಿಯಲ್ಲಿ 25 ಸಾವಿರ ಲೀಟರ್ ಹಾಲನ್ನು ಮೊನ್ನೆ ಸುರಿದರು: ಬೆಂಗಳೂರಿನಲ್ಲಿ ಕೆಟ್ಟು ವಾಸನೆಯಿಂದ ಕೂಡಿದೆ. ಅಲ್ಲಿ ಹೋಗಿ ಆ ವಾಸನೆಯನ್ನು ನೋಡಿದರೆ, ಆ ಹಾಲನ್ನು ಕುಡಿಯಬೇಕೇ, ಬಿಡಬೇಕೇ ಎನ್ನುವುದು ಗೊತ್ತಾಗುತ್ತದೆ. ಇದು ಕೆಲವು ಡೈರಿಗಳು ಇರತಕ್ಕಂಥ ವ್ಯವಸ್ಥೆ. ಇದನ್ನೆಲ್ಲಾ ತಾವು ನೋಡಲಿಲ್ಲವೆಂದರೆ, ಗ್ರಾಹಕರಿಗೆ ನಾವು ನೇರವಾಗಿ ಮೋಸಮಾಡಿದ ಹಾಗೆ ಆಗುತ್ತದೆ. ಆದ್ದರಿಂದ, ದಯವಿಟ್ಟು ತಾವೇ ವೈಯುಕ್ತಿಕವಾಗಿ ಹೋಗಿ, ಪ್ರಮಾಣ ಎಷ್ಟು ,ತೂಕ ಎಷ್ಟು ಕೊಡುತ್ತಾ ಇದ್ದೇವೆ, ಮತ್ತು ಇದರ ವ್ಯವಸ್ಥೆ ಎಷ್ಟು, ಎಷ್ಟು ಪರಿಶುದ್ಧವಾಗಿದೆ, ಇದನ್ನೆಲ್ಲಾ ತಾವು ನೋಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ

ಶ್ರೀ ಕೆ. ಎನ್ . ನಾಗೇಗೌಡ : ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರು ಹಾಗೂ ವಾಟಾಳ್ ನಾಗರಾಜರು ಏನು ಪ್ರಸ್ತಾಪ ಮಾಡಿದ್ದಾರೆ, ಇಂತಹ ದೂರುಗಳನ್ನು ನಾನೂ

ಸಹ ಅಲ್ಲಿ, ಇಲ್ಲಿ, ಕೇಳಿದ್ದೇನೆ. ಈ ದೂರುಗಳನ್ನು ಕೇಳಿದ ತಕ್ಷಣ ನಾನು ಗ್ರಾಹಕರ ಹಿತರಕ್ಷಣೆಯನ್ನು ಗಮನಿಸಿಕೊಂಡು, ಒಂದು ಜಾಗೃತ ದಳವನ್ನು ಅಂದರೆ, ಗ್ರಾಹಕರ ಹಿತರಕ್ಷಣೆ ಮಾಡಿಕೊಂಡು, ಪಬ್ಲಿಕ್ ಗ್ರಿವೆನ್ಸ್ ಸೆಲ್ ಎಂದು ಮಾಡಲಾಗಿದೆ. ಇದರಲ್ಲಿ ಮಾನ್ಯ ಕೃಷ್ಣಯ್ಯರ್ ಅವರು, ಇನ್ನೂ ಅನೇಕ ಇಂತಹ ಮುಖಂಡರನ್ನೊಳಗೊಂಡ ಒಂದು ಪಬ್ಲಿಕ್ ಗ್ರಿವೆನ್ಸ್ ಸೆಲ್‌ನ್ನು ನನ್ನ ಅಧ್ಯಕ್ಷತೆಯಲ್ಲಿ, ಶಾಸಕರುಗಳು, ಮಂತ್ರಿಗಳು ಮತ್ತು ಪಬ್ಲಿಕ್ ಗ್ರಿವೆನ್ಸ್ ಸೆಲ್‌ನವರು ಈಗಾಗಲೇ ಪ್ರತಿ ಡೈರಿಯಲ್ಲಿ ಮೂಡಿದ್ದೇವೆ. ಬೆಂಗಳೂರು ನಗರದಲ್ಲಿ ವಿಶೇಷವಾಗಿ 5 ಲಕ್ಷ ಲೀಟರ್ ಹಾಲನ್ನು ಮಾರುತ್ತಿರುವ ಹಿನ್ನೆಲೆಯಲ್ಲಿ, ನಾವು ಈ ಪಬ್ಲಿಕ್ ಗ್ರಿವೆನ್ಸ್ ಸೆಲ್ ನವರು ಅಧಿಕಾರಿಗಳನ್ನೊಳಗೊಂಡು ಬೆಂಗಳೂರಿನಲ್ಲಿ ಕಳಿದ ವಾರ ಈ ಸಭೆ ನಡೆಸಿದ್ದೇವೆ. ಇಂತಹ ದೂರುಗಳು ಬಂದರೆ, ಅದು ಯಾರೇ ಏಜೆಂಟರು ಮಾಡಿರಲಿ, ಅಥವಾ ಲೋಡರ್ಸ್ ಮಾಡಿರಲಿ ಅಥವಾ ಡೈರಿಯವರು ಮಾಡಿರಲಿ, ಯಾರೇ ಮಾಡಿರಲಿ, ಅವರ ಮೇಲೆ ಉಗ್ರವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂದೆಮುಂದೆ ಸರ್ಕಾರ ಯೋಚನೆ ಮಾಡುವುದಿಲ್ಲ ಎನ್ನತಕ್ಕಂಥ ಆಶ್ವಾಸನೆ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರು ತುಮಕೂರು ಡೈರಿ ವಿಚಾರ ಹೇಳಿದ್ದಾರೆ. ಆ ತುಮಕೂರು ಡೈರಿಯ, ಯಾವ ಏಜೆಂಟ್ ಅಥವಾ ಯಾರಿಂದ ಮಾಡುತ್ತಿತ್ತು ಎನ್ನತಕ್ಕಂಥ ಮಾಹಿತಿ ನನಗೆ ಬೇಕಾಗಿದೆ. ಅದನ್ನು ತಂದರೆ, ನಾವು ಈಗಾಗಲೇ ಹೇಳಿದ್ದೇವೆ. 20 ಏಜೆಂಟರುಗಳನ್ನು ರದ್ದು ಮಾಡಿದ್ದೇವೆ.

ಶ್ರೀ ಆರ್. ವಿ. ದೇಶಪಾಂಡೆ : ತಾವು ಏಜೆಂಟ್ ಅಷ್ಟೇ ನೋಡಬಾರದು. ಡೈರಿ ಪಾಯಿಂಟ್ ಕೂಡ ನೋಡಬೇಕು.

ಶ್ರೀ ಕೆ. ಎನ್ . ನಾಗೇಗೌಡ : ಇದರಲ್ಲಿ ಮೂರು ಕಾರಣ. ಒಂದು ಏಜೆಂಟ್ಸ್ ಇರಬಹುದು, ಲೋಡರ್ಸ್ ಇರಬಹುದು ಅಥವಾ ಪ್ಯಾಕಿಂಗ್ ಇದೆ ನೋಡಿ, ಆ ಪ್ಯಾಕಿಂಗೂ ಸರಿ ಇಲ್ಲ. ಆ ಕ್ವಾಲಿಟಿಯೇ ಸರಿಯಿಲ್ಲವೆಂದು, ಈಗ ನಾವೆಲ್ಲಿ ತರಿಸಿಕೊಳ್ಳುತ್ತಿದ್ದೆವೋ ಆ ಪ್ಲಾಸ್ಟಿಕ್ ಪ್ಯಾಕಿಂಗ್‌ನ, ಆ ಗ್ರಾನ್ಯುಯಲ್ಸ್‌ನ್ನು ನಿಲ್ಲಿಸಿ, ಉತ್ತಮವಾದಂಥ ಗ್ರಾನ್ಯುಯಲ್ಸ್‌ನ್ನು ಕೊಂಡುಕೊಂಡು ಪ್ಯಾಕಿಂಗ್ ಮಾಡಬೇಕೆಂದು ಈಗಾಗಲೇ ನಿರ್ದೇಶನ ಕೊಟ್ಟಿದೆ. ಸ್ವಲ್ಪ ಕಾಲ ಕೊಡಲಿ, ಇಂತಹ ದೂರುಗಳು ಬಂದರೆ, ದಯವಿಟ್ಟು ನನಗೆ ತಿಳಿಸಲಿ. ಈಗಾಗಲೇ ಪ್ರತಿ ಡೈರಿಗೂ ದೂರವಾಣಿ ಕೊಟ್ಟಿದ್ದೇವೆ. ಮತ್ತು ಪಬ್ಲಿಕ್ ಗ್ರಿವನ್ಸ್ ಸೆಲ್‌ಗೆ ಮತ್ತೆ ವಾಟಾಳ್ ನಾಗಾರಾಜ್‌ರವರು ಚನ್ನರಾಯಪಟ್ಟಣಕ್ಕೆ ಹಾಲು ಹೋಗಿದೆ ಎಂದು ಹೇಳಿದರು. ಮೈಸೂರಿನಿಂದ ಅಂತ ಅದರ ಬಗ್ಗೆ ತನಿಖೆ ಮಾಡಲು ನಾನು ಈಗಾಗಲೇ ತನಿಖಾಧಿಕಾರಿಗಳನ್ನು ನೇಮಿಸಿದ್ದೇನೆ. ಅದರಲ್ಲೂ 25 ಸಾವಿರ ಲೀಟರ್ ಚನ್ನರಾಯಪಟ್ಟಣಕ್ಕೆ ಹೇಗೆ ಹೋಯಿತು ಏಕೆ ಹೋಯಿತು ?

ಶ್ರೀ ವಾಟಾಳ್ ನಾಗರಾಜ್ : ಚಾಮರಾಜನಗರದಿಂದ ತಂದಂತಹ 25 ಸಾವಿರ ಲೀಟರ್ ಹಾಲು ಸುರಿದಿದ್ದಾರೆ.

ಶ್ರೀ ಕೆ. ಎನ್. ನಾಗೇಗೌಡ : ಅದು ಏಕೆ ಸುರಿದಿದ್ದಾರೆ ಆಹಾಲು ಎಲ್ಲಿ ಹೋಗಿದೆ ಎನ್ನತಕ್ಕಂಥಾದ್ದನ್ನೇ ತನಿಖೆ ಮಾಡಲು ಆಜ್ಞೆ ಮಾಡಿದ್ದೇನೆ.

ಅಂಗನವಾಡಿ ಕಾರ್ಯಕರ್ತರ ಬಂಧನ